ಓ ಎಸ್ 50/2023

ಡಿ. ಡಬ್ಲ್ಯೂ: 01

**ದಿಃ 19-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಆದೇಶದ ಮೇರಿಗೆ ಮುಂದುವರೆದ ಮುಖ್ಯ ವಿಚಾರಣೆಗೆ ಅವಕಾಶ ನೀಡಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ವಿವಾಹ ಆಮಂತ್ರಣ ಪತ್ರಿಕೆಯನ್ನು ನಿ.ಡಿ.10 ಎಂದು, ಸಂಯುಕ್ತ ಕರ್ನಾಟಕ ಪತ್ರಿಕೆ ಅವರು ನೀಡಿದ ರಶೀದಿಯನ್ನು ನಿ.ಡಿ.11 ಎಂದು, ಮತದಾರ ಪಟ್ಟಿಯನ್ನು ನಿ.ಡಿ.12 ಎಂದು, ಗ್ರಾಮ ಪಂಚಾಯತಿ ಅವರು ನೀಡಿದ ರಶೀದಿಯನ್ನು ನಿ.ಡಿ.13 ರಿಂದ 16 ಎಂದು, ಪಡಿತರ ಚೀಟಿಯನ್ನು ನಿ.ಡಿ.17 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ ಜಿ ಜಿ ವಕೀಲರಿಂದ**

ನಿ.ಡಿ.10 ನ್ನು ಕಲಘಟಗಿಯಲ್ಲಿ ಪ್ರಿಂಟ್ ಹಾಕಿಸಿದ್ದು ಯಾರು ಹಾಕಿಸಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ವಿವಾಹನ ಆಮಂತ್ರಣ ಪತ್ರಿಕೆಗಳನ್ನು ಪ್ರಿಂಟ್ ಮಾಡಲು ಕೊಟ್ಟಾಗ ಅವರು ರಶೀದಿ ನೀಡುತ್ತಾರೆ ಎಂದರೆ ನಿಜ. ನಿ.ಡಿ.10 ಕ್ಕೆ ಸಂಭಂದಿಸಿದಂತೆ ರಶೀದಿ ಹಾಜರುಪಡಿಸಿಲ್ಲ. ನಿ.ಡಿ.11 ರ ಮೇಲೆ ಪತ್ರಿಕೆಯ ಶೀಲ್ ಇರುವುದಿಲ್ಲ ಎಂದರೆ ನಿಜ. ನಿ.ಡಿ.12 ರ ಮೇಲೆ ನೀಡಿದವರ ಸಹಿ ಮತ್ತು ಶೀಲ್ ಇರುವುದಿಲ್ಲ ಎಂದರೆ ನಿಜ. ನಿ.ಡಿ.10 ರಿಂದ 16 ರ ದಾಖಲೆಗಳನ್ನು ಈ ಮೊದಲೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಕಾರ್ಡ ಆ ಸಮಯದಲ್ಲಿ ಸಿಕ್ಕಿರಲಿಲ್ಲ ಎನ್ನುತ್ತಾರೆ. ನಿ.ಡಿ.17 ಮಾತ್ರ ಈ ಹಿಂದೆ ಸಿಕ್ಕಿರಲಿಲ್ಲ ಎಂದರೆ ನಿಜ. ನಿ.ಡಿ.13 ರಿಂದ 16 ದಾಖಲೆಗಳನ್ನು ನಾನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.10 ರಿಂದ 17 ದಾಖಲೆಗಳನ್ನು ಸೃಷ್ಟಿಸಿ ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**

**ಕಲಘಟಗಿ.**